## ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮ

**1,786**
ಏಪ್ರಿಲ್ 2024 ರಿಂದ ಮಾರ್ಚ್ 2025

**1,359**
ಏಪ್ರಿಲ್ 2025 ರಿಂದ ಡಿಸೆಂಬರ್ 2025

## ತರಬೇತಿ ಪಡೆದ ಆರೋಗ್ಯ ವೃತ್ತಿಪರರು

| 2024–25 | 2025–26 |
|---|---|
| 20,281 | 10,583 |






## ಟೆಲಿ ನ್ಯೂರಾಲಜಿ ಸೆಷನ್ಸ್

ದೂರದ ಗ್ರಾಮೀಣ ಪ್ರದೇಶಗಳಲ್ಲಿ ನರರೋಗಿಗಳಿಗೆ ದೂರವಾಣಿ ಅಥವಾ ವಿಡಿಯೋ ಕರೆ ಮೂಲಕ ನರರೋಗ ತಜ್ಞರಿಂದ ಆರೋಗ್ಯ ಸಲಹೆ ಮತ್ತು ಚಿಕಿತ್ಸೆ ನೀಡಲಾಗುತ್ತಿದೆ. ಇದರಿಂದ ಸಮಯಕ್ಕೆ ಸರಿಯಾದ ವೈದ್ಯಕೀಯ ಸೇವೆ ದೊರಕುತ್ತಿದೆ.

| 2024-25 | 2025-26 |
|---|---|
| 318 sessions | 859 sessions |



## ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟೀವ್ (ಕೆಎಬಿಎಚ್ಐ) ಫಲಿತಾಂಶ!

- ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ ವೈದ್ಯಾಧಿಕಾರಿಗಳಿಗೆ, ನರ್ಸ್‌ಗಳು ಸೇರಿದಂತೆ ಇನ್ನಿತರೆ ವೈದ್ಯಕೀಯ ಸಿಬ್ಬಂದಿಗೆ ಸ್ಟ್ರೋಕ್ ಮತ್ತು ಇತರೆ ನರರೋಗಗಳನ್ನು ನಿರ್ವಹಿಸುವ ಕುರಿತು ಅಗತ್ಯ ತರಬೇತಿಯನ್ನು ನೀಡಲಾಗಿದೆ.
- ಏಪ್ರಿಲ್ 2024 ರಿಂದ ಮಾರ್ಚ್2025 ವರೆಗೆ 3,38,602 ತಪಾಸಣೆ ಮತ್ತು 1,10,990 ನರರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.
- ಏಪ್ರಿಲ್ 2025 ರಿಂದ ಡಿಸೆಂಬರ್ 2025 ವರೆಗೆ 1,33,030 ಜನರನ್ನು ತಪಾಸಣೆ ಮತ್ತು 85,929 ನರರೋಗ ಚಿಕಿತ್ಸೆ ನೀಡಲಾಗಿದೆ.

- ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ (MD Physicians) ಸ್ಟ್ರೋಕ್ ಹಾಗೂ ಇನ್ನಿತರೆ ನರರೋಗ ಚಿಕಿತ್ಸೆಗಳ ನಿರ್ವಹಣೆಗಾಗಿ ಅಗತ್ಯ ತರಬೇತಿ ಒದಗಿಸುವುದು.
- ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ನರರೋಗಗಳು, ಮಿದುಳಿಗೆ ಸಂಬಂಧಿಸಿದಂತೆ ಸಮಸ್ಯೆಗಳಿಗೆ ಆರಂಭಿಕ ಚಿಕಿತ್ಸೆ ನೀಡಲು ತರಬೇತಿ ನೀಡುವುದು.
- ಸಾಮಾನ್ಯ ನರರೋಗಗಳನ್ನು ಶೀಘ್ರ ಪತ್ತೆಹಚ್ಚಲು ಸಿಎಚ್ಒ, ಆಶಾ ಮತ್ತು ಇನ್ನಿತರ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡುವುದು.
- ದೂರದ ಪ್ರದೇಶಗಳಲ್ಲಿರುವ ರೋಗಿಗಳಿಗೆ ಟೆಲಿನ್ಯೂರಾಲಜಿ ಮುಖಾಂತರ ನರರೋಗದ ಬಗ್ಗೆ ಸಲಹೆಗಳನ್ನು ನೀಡುವುದು.

### ಗುರಿಗಳೇನು?

ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟೀವ್(ಕೆಎಬಿಎಚ್ಐ) ಕಾರ್ಯಕ್ರಮದ ಮೂಲಕ ರಾಜ್ಯಾದ್ಯಂತ ನರರೋಗಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವುದರೊಂದಿಗೆ ಗ್ರಾಮೀಣ ಭಾಗಗಳಲ್ಲಿನ ಆಯುಷ್ಮಾನ್ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಸಾರ್ವಜನಿಕ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಬ್ರೈನ್ ಹೆಲ್ತ್ ಕ್ಲಿನಿಕ್‌ಗಳ ಹಂತದಲ್ಲಿಯೇ ಸೂಕ್ತ ಸಮಾಲೋಚನೆ ವ್ಯವಸ್ಥೆಯೊಂದಿಗೆ ಅಗತ್ಯ ಚಿಕಿತ್ಸಾ ಸೌಕರ್ಯವನ್ನು ಉತ್ತೇಜಿಸುವುದನ್ನು ಗುರಿಯನ್ನಾಗಿಸಿಕೊಂಡಿದೆ. ಜತೆಗೆ, ನರರೋಗ, ಮಾನಸಿಕ ಕಾಯಿಲೆಗಳನ್ನು ಸಾಧ್ಯವಾದಷ್ಟು ಆರಂಭದಲ್ಲಿಯೇ ತಡೆಗಟ್ಟುವುದು, ಸೂಕ್ತ ಆರೈಕೆ ಒದಗಿಸುವುದು, ಚಿಕಿತ್ಸೆಗೆ ಮಾದರಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಗುರಿಯನ್ನು ಹೊಂದಲಾಗಿದೆ.

### ರಾಜ್ಯಾದ್ಯಂತ ಅನುಷ್ಠಾನ!

ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟೀವ್(ಕೆಎಬಿಎಚ್ಐ) ಕಾರ್ಯಕ್ರಮವನ್ನು ಬಹುತೇಕ ರಾಜ್ಯಾದ್ಯಂತ ಅನುಷ್ಠಾನಕ್ಕೆ ತರಲಾಗಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಮತ್ತು 1 ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಭಾಗವಾಗಿ ಬ್ರೈನ್ ಹೆಲ್ತ್ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಲಾಗಿದೆ. ಜಿಲ್ಲೆಗಳ ಜಿಲ್ಲಾಸ್ಪತ್ರೆಗಳಲ್ಲಿ ಈ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ನರರೋಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ, ಮುಂದಿನ ಹಂತದ ಚಿಕಿತ್ಸೆಗೆ ಸೂಚಿಸುವ ಕೆಲಸಗಳನ್ನು ಮಾಡಲಾಗುತ್ತಿದೆ. , ಪಾರ್ಶ್ವವಾಯು, ಮೂರ್ಛೆ ರೋಗ, ಮರೆವಿನ ಕಾಯಿಲೆ, ತೀವ್ರ ತಲೆನೋವು ಸೇರಿದಂತೆ ಮಿದುಳಿಗೆ ಸಂಬಂಧಿಸಿದ ಎಲ್ಲಾ ರೋಗಗಳನ್ನು ಆರಂಭದ ಹಂತವಾಗಿ ಬ್ರೈನ್ ಹೆಲ್ತ್ ಕ್ಲಿನಿಕ್‌ಗಳಲ್ಲಿ ಪರಿಶೀಲನೆ ಮಾಡಲಾಗುತ್ತಿದೆ. ■